ಎನ್ನೋದು ಅರ್ಥವಾಯ್ತು. ನನ್ನ ಬರವಣಿಗೆಯಲ್ಲಿ ಹೆಣ್ಣಿನ ಬಗ್ಗೆ ಬಹಳ ಗೌರವ–ಪ್ರೀತಿ ಕಾಣಿಸಿದರೆ ಅದಕ್ಕೆ ನಾನು ಬೆಳೆದ ವಾತಾವರಣ ಕಾರಣ. ಫೆಮಿನಿಸ್ಟ್ ಆಗಬೇಕು ಎನ್ನುವ ದೃಷ್ಟಿ ಇರಲೇಇಲ್ಲ. ಬೆಳೆಯುತ್ತಲೇ ಹಾಗೆ ಬೆಳೆದೆ. ಹಾಗಾಗಿ ನನ್ನನ್ನು ನಾನು 'ಮಾತೃ ಗೋತ್ರದ ಕವಿ' ಎಂದು ಕರೆದುಕೊಳ್ತೇನೆ. ಸಾಮಾನ್ಯವಾಗಿ ತಂದೆ ಹೆಸರು ಹೇಳಿಕೊಳ್ತಾರೆ ಅಲ್ಲವೇ? ಸತ್ಯಕಾಮ ಒಬ್ಬರೇ ತಾಯಿ ಹೆಸರು ಹೇಳಿದ್ದು. ಆದರೆ, ನಮ್ಮ ಕವಿಗಳೆಲ್ಲ ತಾಯಿಯ ಮಕ್ಕಳು. ಅಂಬಿಕಾತನಯದತ್ತ – ಅಂಬವ್ವನ ಮಗ ಬೇಂದ್ರೆ. ಕುವೆಂಪು ಅವರಿಗಂತೂ ತಾಯಿ ಎಂದರೆ ದೇವತೆ, ಹೆಂಡತಿ ಸಾಕ್ಷಾತ್ ದೇವಿಯ ಅವತಾರ. ನರಸಿಂಹಸ್ವಾಮಿ ಅವರಂತೂ ಹೆಂಡತಿಯನ್ನು ತಲೆಯ ಮೇಲೆ ಹೊತ್ತು ಮೆರೆಸಿದೋರು. ಶಿವರುದ್ರಪ್ಪನವರು ತಾಯಿಯನ್ನು ಕಾಣಲು ಯಾವಾಗಲೂ ಹಂಬಲಿಸೋರು. ಅವರು ತಾಯಿಯನ್ನು ನೋಡಿದೋರೆ ಅಲ್ಲ. ಹೆಣ್ಣಿನ ಮುಖ ಕಾಣಿಸಿದಾಗಲೆಲ್ಲ ತಾಯಿಯ ಮುಖ ಹುಡುಕೋರು. (ಜಡೆಯಾಚೆ ತಿರುಗಿಸಿದ ತಾಯ ಮುಖ ಮಾತ್ರ ಇಂದಿಗೂ ಕಾಣದಲ್ಲ!)

ಕನ್ನಡದ ಬಹಳಜನ ಕವಿಗಳು ಒಂದು ರೀತಿಯಲ್ಲಿ ಸ್ತ್ರೀಪಕ್ಷಪಾತಿಗಳು. ಸ್ತ್ರೀಪಕ್ಷಪಾತ ಮತ್ತು ಸ್ತ್ರೀತ್ವ ಕವಿಯಾಗಲಿಕ್ಕೆ ಅಗತ್ಯ. ಪುರುಷರು ತಮ್ಮ ಬದುಕಿನಲ್ಲಿ ಸ್ತ್ರೀತ್ವವನ್ನು ಸಾಧನೆ ಮಾಡಬೇಕು ಎಂದು ನನಗೆ ಅನ್ನಿಸುತ್ತೆ. ಹೆಣ್ಣಿಗೆ ಪೌರುಷದ ಅಗತ್ಯವಿರುವಂತೆ ಗಂಡಿಗೆ ಹೆಣ್ತನದ ಅಗತ್ಯವೂ ಇದೆ. ಅರ್ಧನಾರೀಶ್ವರ ತತ್ವ ಬಹಳ ಮುಖ್ಯವಾದುದು. ನಾನು ಪುರುಷ ಎನ್ನೋದು ಕೇವಲ ಅಹಂಕಾರ. ಅಲ್ಲಿ ಕರುಣೆ ಇರೊಲ್ಲ, ಕಣ್ಣೀರು ಇರೊಲ್ಲ. ಕಣ್ಣೀರಿಲ್ಲದೆ ಕವಿತೆ ಹುಟ್ಟಲಾರದು. ಕಾವ್ಯ ಎಂದರೆ ಕಣ್ಣೀರನ್ನು ಹಿಂಬಾಲಿಸೋದು ಎಂದು ನಮ್ಮ ಸಂಸ್ಕೃತಿ ಹೇಳುತ್ತೆ. ದುಃಖವನ್ನು ಅರಸಿಕೊಂಡು ಹೋಗೋದು, ಸಾಧ್ಯವಾದರೆ ಅದನ್ನು ಪರಿಹರಿಸೋದು ಕಾವ್ಯದ ಉದ್ದೇಶ. ಕಡೆಯಪಕ್ಷ ಎರಡುಹನಿ ಕಣ್ಣೀರನ್ನು ಒರೆಸೋದು. ಈ ಆರ್ದ್ರತೆ, ಇನ್ನೊಬ್ಬರ ದುಃಖವನ್ನು ತಾನು ಅನುಭವಿಸೋದನ್ನು ಕಾವ್ಯ ನಮಗೆ ಕಲಿಸಿಕೊಡುತ್ತೆ. ನನ್ನ ಅಳು ಬಹಳ ಸಹಜ. ತಾಯಿ–ತಂದೆಗೆ, ಮಿತ್ರರಿಗಾಗಿ ಅತ್ತಾಗ ದುಃಖದ ಅನುಭವ ವರ್ತುಲ ಹೆಚ್ಚಾಗುತ್ತದೆ. ಹಳ್ಳಿಗಾಗಿ ಮರುಗಿದರೆ ಆ ವ್ಯಾಪ್ತಿ ಮತ್ತಷ್ಟು ಹೆಚ್ಚಾಗುತ್ತದೆ. ದೇಶಕ್ಕಾಗಿ ಅಳೋದಿದೆಯಲ್ಲ, ಗಾಂಧಿ–ಅಂಬೇಡ್ಕರ್ ಅವರಂತೆ, ದೊಡ್ಡ ಸಮುದಾಯಕ್ಕಾಗಿ ಅಳುವುದಿದೆಯಲ್ಲ, ಬುದ್ಧನ ಹಾಗೆ – ಈ ಕಣ್ಣೀರನ್ನು ಒರೆಸುವ ಕ್ರಿಯೆಯನ್ನು ಬಸವಣ್ಣನವರು ಪ್ರಾಣಿಲೋಕಕ್ಕೂ ವಿಸ್ತರಿಸಿದರು, ದಯವೇ ಧರ್ಮದ ಮೂಲವೆಂದರು. ಬುದ್ಧ ಒಂದು ರೀತಿಯಲ್ಲಿ ನಮ್ಮ ಕಾವ್ಯದ ಗುರು. ನಮ್ಮ ದೊಡ್ಡ ದೊಡ್ಡ ನಾಯಕರೆಲ್ಲ ತಮ್ಮ ವರ್ತುಲದಾಚೆಗಿನವರಿಗಾಗಿ ಕಣ್ಣೀರು ಹಾಕಿದವರು. ಇನ್ನೊಬ್ಬರಿಗಾಗಿ ಅಳುವುದನ್ನು ಕಲೆ ನಮಗೆ ಕಲಿಸುತ್ತದೆ. ಯಾರು ಕಲೆಯನ್ನು ಪ್ರೀತಿಸುವರೋ, ಕವಿತೆಯನ್ನು ಓದುವರೋ, ನಾಟಕ–ಸಿನಿಮಾ ನೋಡುತ್ತಾರೋ ಅವರು ಕ್ರೂರಿಯಾಗುವುದು ಕಷ್ಟ. ಸಮಾಜಮುಖತೆ ಎನ್ನುವುದು ಅವರಿಗೆ ಸಹಜವಾಗಿಯೇ ಬರುತ್ತೆ.

◆ ಮಲ್ಲಾಡಿಹಳ್ಳಿಯೊಂದಿಗೆ ನಿಮ್ಮ ಸಂಬಂಧ ಬೆಳೆದದ್ದು ಹೇಗೆ?

ನನ್ನನ್ನು ಓದಿಸಲಿಕ್ಕೆ ಮನೆಯಲ್ಲಿ ಆರ್ಥಿಕ ಅಡಚಣೆಯಿತ್ತು. ಅಮ್ಮ ಇರೋಬರೋ ಹೊಲವನ್ನು ಸ್ವಲ್ಪ ಸ್ವಲ್ಪ ಮಾರೋರು, ನನ್ನನ್ನು ಓದಿಸೋರು. ನಮ್ಮಮ್ಮ ಸಂಗೀತ ಜ್ಯೂನಿಯರ್ ಮಾಡಿದ್ದರು. ಶಾಲೆಯಲ್ಲಿ ಸಂಗೀತ ಹೇಳಿಕೊಡುತ್ತಿದ್ದರು. ಹತ್ತು ರೂಪಾಯಿ ಸಂಬಳ. ಬೇಗ ಉದ್ಯೋಗ ದೊರಕುತ್ತದೆಂದು ನಾನು ಮೆಕ್ಯಾನಿಕಲ್ ಎಂಜಿನಿಯರಿಂಗ್ ಡಿಪ್ಲೊಮ ಮಾಡಿದೆ. ಡಿಪ್ಲೊಮ ತರಗತಿಯಲ್ಲಿ, ಎಂಜಿನಿಯರಿಂಗ್ ಪುಸ್ತಕದ ಹೊದಿಕೆಯೊಳಗೆ ಕಾರಂತರ ಬೆಟ್ಟದಜೀವ. ಈ ರೀತಿಯ ಸಾಹಿತ್ಯದ ಹುಚ್ಚು ಇರುವಾಗ ಫಸ್ಟ್ ಕ್ಲಾಸ್ ಬರಲು ಸಾಧ್ಯವೇ? ಪಾಸಾದೆ ಅಷ್ಟೇ. ಮಲ್ಲಾಡಿಹಳ್ಳಿ